೭. ಕರ್ನಾಟಕ ಕಲಾ ಸೊಸೈಟಿ, ಬೆಳಗಾಂ.
೮. ಮಲೆನಾಡು ಮೆಡಿಕಲ್ ಕಾಲೇಜು, (ಬಿ. ಆರ್. ಅಂಬೇಡ್ಕರ್ ಮಿಷನ್)
೯. ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ.
೧೦. ಫಧಾರ್‌ಮುಲ್ಲರ್ ಇನ್ಸ್‌ಟಿಟ್ಯೂಟ್, ಕಂಕನಾಡಿ, ಮಂಗಳೂರು.
೧೧. ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ.
೧೨. ಶ್ರೀ ವೀಣಾ ಶಾರದ ಎಜುಕೇಷನ್ ಸೊಸೈಟಿ, ಹಾಸನ.
೧೩. ತಾರಾನಾಥ್ ಶಿಕ್ಷಣ ಸಂಸ್ಥೆ, ರಾಯಚೂರು.
೧೪. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಬೀದರ್.
೧೫. ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ.
೧೬. ಆರ್. ಅಮಹಮದ್ ವಿದ್ಯಾಸಂಸ್ಥೆ, ಶಿವಮೊಗ್ಗ.
೧೭. ಶರಬೇಶ್ವರ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ.
೧೮. ನಾನಕಬೀರ್ ಫೌಂಡೇಷನ್, ಬೀದರ್.
೧೯. ಜಗದ್ಗುರು ಮೂರು ಸಾವಿರದ ಮಠ, ಜೆ.ಜೆ. ಸಹಕಾರ ಸಂಘ, ರೂರಲ್ ಮೆಡಿಕಲ್ ಕಾಲೇಜು, ಹುಬ್ಬಳ್ಳಿ.
೨೦. ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಶಿವಮೊಗ್ಗ.
೨೧. ಚಾಮುಂಡಿ ಮೆಡಿಕಲ್ ಫೌಂಡೇಷನ್, ಬೆಂಗಳೂರು.
೨೨. ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.
೨೩. ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಬಾಳ್ಕಿ.
೨೪. ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್-ಯುನಾಪೋಯ, ಮಂಗಳೂರು.
೨೫. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ, ಉಜಿರೆ, ಧಾರವಾಡ ಜಿಲ್ಲೆ.
೨೬. ಶ್ರೀನಿವಾಸ ಟ್ರಸ್ಟ್, ಬೆಂಗಳೂರು.
೨೭. ಸರ್.ಎಂ. ವಿಶ್ವೇಶ್ವರಯ್ಯ ಎಜುಕೇಷನ್ ಟ್ರಸ್ಟ್, ಕೋಲಾರ.
೨೮. ಶರಾವತಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ.
೨೯. ಶ್ರೀ ರಾಜೀವ್ ಗಾಂಧಿ ಎಜುಕೇಷನ್ ಟ್ರಸ್ಟ್ ಮೈಸೂರು.
೩೦. ಎಲ್ಲಮ್ಮ ದಾಸಪ್ಪ ಎಜುಕೇಷನ್ ಟ್ರಸ್ಟ್, ಬೆಂಗಳೂರು.
೩೧. ಪೀಪಲ್ಸ್ ಎಜುಕೇಷನ್ ಟ್ರಸ್ಟ್, ಮಂಡ್ಯ.
೩೨. ಮಹಾತ್ಮಾಗಾಂಧಿ ವಿದ್ಯಾಪೀಠ ಟ್ರಸ್ಟ್, ಬೆಂಗಳೂರು.
೩೩. ಕರ್ನಾಟಕ ಪ್ರದೇಶ ಕುರುಬರ ಸಂಘದ, ಶಿಕ್ಷಣ ಸಂಸ್ಥೆ, ಧಾರವಾಡ.
೩೪. ಶ್ರೀಮತಿ ಕೆಂಪುಚೆಲುವಾಜಮ್ಮಣ್ಣಿ ಎಜುಕೇಷನ್ ಟ್ರಸ್ಟ್, ಮೈಸೂರು.
೩೫. ಹೇಮಾವತಿ ಎಜುಕೇಷನ್ ಟ್ರಸ್ಟ್, ಹಾಸನ.
೩೬. ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

ವಿಷಯ:- ಪಶುವೈದ್ಯಕೀಯ ಆಸ್ಪತ್ರೆ ತೆರೆಯಲು ಒತ್ತಾಯ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೮೮: (೬೩೧)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯ ಶಾಲೆಗಳನ್ನು ತೆರೆಯಲು ಒತ್ತಾಯವಿದೆಯೇ?
ಆ) ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ತೆರೆಯಲು ಒತ್ತಾಯ ಬಂದಿರುವುದು

ಹಾಗೂ ಎಂದಿನಿಂದ ಅವುಗಳು ಬಾಕಿ ಉಳಿದಿರುತ್ತದೆ;

ಇ) ಪ್ರಸ್ತುತ ಸಾಲಿನಲ್ಲಿ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಲಾಗುವುದೇ;

ಈ) ಹಾಗಿದ್ದಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಸದರಿ ಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ತೆರೆಯಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ
(ಪಶುಸಂಗೋಪನಾ ಸಚಿವರು)

ಇದೆ.

ರಾಜ್ಯಾದ್ಯಂತ ಒತ್ತಾಯಗಳು ಬಂದಿದ್ದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಭಾಗಶಃ ಈಡೇರಿಸಲಾಗುವುದು.

ಸ್ಥಳಗಳನ್ನು ಗುರುತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ರಾಜ್ಯದಲ್ಲಿ ಆರೋಗ್ಯ ವಿಶ್ವವಿದ್ಯಾಲಯ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೯: (೬೩೪)

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದೇ?

ಆ) ಹಾಗಿದ್ದಲ್ಲಿ; ಯಾವ ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು?

ಇ) ಅದನ್ನು ಯಾವ ಜಿಲ್ಲೆಯಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆ?

ಈ) ಅದನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಸರ್ಕಾರ ಮುಂದೆ ಬರುವುದೇ?

ಉ) ಅದಕ್ಕಾಗಿ ಏನಾದರೂ ಪೂರ್ವಭಾವಿ ಕೆಲಸಗಳು ಪ್ರಾರಂಭವಾಗಿರುವುದೇ?

ಶ್ರೀ ಜಿ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು)

ಪರಿಶೀಲಿಸಲಾಗುತ್ತಿದೆ.

ಪರಿಶೀಲಿಸಲಾಗುತ್ತಿದೆ.

ಡಾ. ಹೆಚ್. ನರಸಿಂಹಯ್ಯ ಸಮಿತಿಯ ಭಾಗ-೨ರಲ್ಲಿ ಸಲ್ಲಿಸಿರುವ ವರದಿಯಲ್ಲಿ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸಲಹೆ ನೀಡಿದ್ದು, ಸದರಿ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿಗಳಾದ ಡಾ. ಹೆಚ್. ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂ. ಆಕುಕ ೧೦೨ ಎಂಎಂಇ ೭೯.. ದಿನಾಂಕ ೭-೧೧-೮೭ರಲ್ಲಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ತಮ್ಮ ಮೊದಲ ಭಾಗದ ವರದಿಯನ್ನು ಡಿಸೆಂಬರ್ ೧೯೯೧ರಲ್ಲಿ ಸಲ್ಲಿಸಿತು. ಅದರಂತೆ ಸರ್ಕಾರಿ ಆದೇಶ ಸಂ:ಆಕುಕ ೨೮ ಎಂಎಸ್‌ಎಫ್ ೯೨, ದಿನಾಂಕ:೧೭-೭-೯೨ರಂತೆ ಒಪ್ಪಿಗೆ ದೊರಕಿದ್ದು, ಇದೇ ಆದೇಶದಲ್ಲಿ ಸರ್ಕಾರವು ಆರೋಗ್ಯ ವಿಶ್ವವಿದ್ಯಾನಿಲಯದ ಪ್ರಾಥಮಿಕ ವಿವರಗಳಿಗಾಗಿ ವಿಶೇಷಾಧಿಕಾರಿ ಹುದ್ದೆಯನ್ನು ಮಂಜೂರು ಮಾಡಿದೆ. ಡಾ. ಹೆಚ್. ನರಸಿಂಹಯ್ಯ ಸಮಿತಿಯು ತಮ್ಮ ಎರಡನೇ ಭಾಗದ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಸರ್ಕಾರವು ಒಪ್ಪಿಕೊಂಡು ತೆರೆಯಬೇಕೆಂದಿರುವ